ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 45.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 18, ಸ್ರ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟಸಂಖ್ಯೆ.
Iನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದ ಆಯಾಯ ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	416—428
IIನೆ ಭಾಗ—ರೆವಿನ್ಯೂ ಸರ್ವೆ, ಫಾರೆಸ್ಟ್ಸ್, ಅಮೃತಮಹಲ್, ರೆವಿನ್ಯೂ, ಪೊಲೀಸ್, ಮ್ಯುನಿಸಿಪಲ್ ಇಲಾಖೆಗಳ ಇಸ್ತಿಹಾರ್ನಾಮೆಗಳು, ಸರ್ಕಾರಿ ಮತ್ತು ಖಾಸಗಿ ಪ್ರಕಟನೆಗಳು ...	862 867
IVನೆ ಭಾಗ—ಸರ್ಕಾರಿ ಕಾಗದಪತ್ರಗಳು-1909ನೆ ವರ್ಷದ 45ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಕ್ರ ರಿಪೋರ್ಟ್ಸ್ ಯಾ ಕಾಲಗತಿಯನ್ನು ತೋರಿಸುವ ವರದಿ ...	473—480

I ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 26ನೆ ಅಕ್ಟೋಬರ್ 1909.

ನಂ. 3758—ಸ್ಯಾನಿಟರಿ 5—09—2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕುಡಿಯನೂರು	ಮಾಲೂರು.

ತಾರೀಖು 6ನೆ ನವೆಂಬರ್ 1909.

ನಂ. 3939—ಸ್ಯಾನಿಟರಿ 5-09-4, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಜೋಡಿ ಗಿಡನಹಳ್ಳಿ	ಚಿಕ್ಕಬಳ್ಳಾಪುರ.

ತಾರೀಖು 9ನೆ ನವಂಬರು 1909.

ನಂ. 4031—ಸ್ಯಾ. 14-09-26, ಘನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ 1909ನೆ ನವಂಬರು 3ನೆ ಮಸ್ಟ್ರಂ 792 ಪಿ. ಡಿ. ನೆ ನಂಬರು ಇಂಡಾರ್ಸುಮೆಂಟಿನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಯೆ ಪ್ರಕಟಿಸಿ ಇದೆ. ಇದರಿಂದ 1909ನೆ ಅಕ್ಟೋಬರು 28ನೆ ಮಸ್ಟ್ರಂ 3768—ಸ್ಯಾ. 14-09-18, ಇಸ್ತಿಹಾರ್ನಾಮೆಯ 2ನೆ ಭಾಗವನ್ನು ರದ್ದುಪಡಿಸಿದೆ.

ಮಲಬಾರ್ ಡಿಸ್ಟ್ರಿಕ್ಟ್ ಪಾಲಘಾಟ್ ತಾಲ್ಲೂಕು ಪಾಲಘಾಟ್ ಟವನಿನಲ್ಲಿ ಪ್ಲೇಗ್ ರೋಗವು ಇರುವದರಿಂದಲೂ, ಇತರ ಕಡೆಗಳಿಗೆ ಸದರಿ ರೋಗವು ವ್ಯಾಪಿಸದ ಹಾಗೆ ಮಾಡಬೇಕಾಗಿರುವದರಿಂದಲೂ ಸಹಾ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವು ದರಲ್ಲಿ ಸಭಾ ಸಮೇತರಾದ ಗವರ್ನರವರು ಪಾಲಘಾಟ್ ತಾಲ್ಲೂಕು ಕಾಲಪಟ್ಟಿಯಲ್ಲಿ ರಥೋತ್ಸವವನ್ನು ನಡಸಕೂಡದೆಂದು ನಿಷೇಧಿಸಿರುತ್ತಾರಲ್ಲದೆ 1909ನೆ ಇಸವಿಯ ನವಂಬರು ಮಾಹೆ 5ನೆ ತಾರೀಖಿನ ಲಾಗಾಯಿತು 20ನೆ ತಾರೀಖಿನ ವರಿಗೆ (ಉಭಯ ದಿನಗಳೂ ಸೇರಿ) ಸದರಿ ಉತ್ಸವಕ್ಕೆ ಯಾತ್ರಾರ್ಥವಾಗಿಯೂ ಕೂಡ ಯಾರೂ ಹೋಗಕೂಡದೆಂದು ಹುಕುಂ ಮಾಡಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

(2) 1909ನೆ ಇಸವಿ ಅಕ್ಟೋಬರ್ 5ನೆ ಮಾರ್ಚಿನ ಫೋರ್ಟ್ ಸೆಂಟ್ ಜಾರ್ಜ್ ಗೆಜೆಟ್ಟಿನ 1ನೆ A ಭಾಗದ 600—1ನೆ ಪುಟಗಳಲ್ಲಿ ಫಾಯಿಷ್ ಮಾಡಿರುವ 207ನೆ ನಂಬರು ಇಸ್ತಿಹಾರ್ನಾಮೆಯನ್ನು ಇದರಿಂದ ರದ್ದುಪಡಿಸಿದೆ.

ತಾರೀಖು 10ನೆ ನವಂಬರ್ 1909.

ನಂ. 4034, ಘನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ 27—10—1909ನೆ ಮಸ್ಟ್ರಂ 762—ಪಿ. ನೆ ನಂಬರ್ ಇಂಡಾರ್ಸುಮೆಂಟಿನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳುವಳಿಕೆಯ ಬಗ್ಯೆ ಪ್ರಕಟಿಸಿ ಇದೆ :—

ದಕ್ಷಿಣ ಆರ್ಕಾಡು ಡಿಸ್ಟ್ರಿಕ್ಟು ತಿರುವಣ್ಣಾಮಲೆ ತಾಲ್ಲೂಕು ತಿರುವಣ್ಣಾಮಲೆಯಲ್ಲಿ ಮುಂದೆ ನಡೆಯುವ ಕಾರ್ತಿಕೆಹಬ್ಬ ಮತ್ತು ದನಗಳ ಪರಿಷೆ ಉತ್ಸವಕ್ಕೆ ಕೊಯಿಮತ್ತೂರು, ಮಲಬಾರು, ಸೇಲಂ ಮತ್ತು ದಕ್ಷಿಣ ಕನಡ ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗು ವ್ಯಾಧಿಯ ಸೋಂಕು ಇರುವ ಪ್ರದೇಶಗಳಿಂದಲೂ, ಮೈಸೂರು ಸಂಸ್ಥಾನದಿಂದಲೂ ಮತ್ತು ಪ್ಲೇಗು ವ್ಯಾಧಿಯ ಸೋಂಕು ಇರುವುದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಬರುವ ಜನರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಪ್ಲೇಗು ರೋಗವು ವ್ಯಾಪಿಸುವ ಅಪಾಯವುಂಟೆಂದು ಸಭಾ ಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವು ದರಲ್ಲಿ ಸಭಾಸಮೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಸದರೀ ಸ್ಥಳಗಳಿಂದ ಯಾರೂ 1909ನೆ ಇಸವಿಯ ನವಂಬರ್ ಮಾಹೆ 12ನೆ ತಾರೀಖಿನ ಲಾಗಾಯಿತು ಅದೇ ಮಾಹೆ 26ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರಲ್ಲದೆ, ಸದರೀ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ ಸ್ಟೇಷ್ಯಗಳಲ್ಲಿ ರೈಲ್ ಮೂಲಕ ಪ್ರಯಾಣ ಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ ;

ಈ ಸ್ಟೇಷ್ಯಗಳಿಂದ :—ದಕ್ಷಿಣ ಇಂಡಿಯ್ಯ ರೈಲ್ವೆಯ ಸಿಂಗನಲ್ಲೂರು, ಪೋದನೂರು, ಕೊಯಿಮತ್ತೂರು, ತುಡಿಯಲೂರು, ವೆಟ್ಟುಪಾಳ್ಯ, ಮಂಗಳೂರು, ಎಲತೂರು, ವೆಸ್ಟ್‌ಹಿಲ್, ಕ್ಯಾಲಿಕಟ್, ಕಳ್ಳಾಯಿ ಮತ್ತು ಫೆರೋಕ್ ಸ್ಟೇಷ್ಯಗಳಿಂದ.

ಈ ಸ್ಟೇಷ್ಯಗಳಿಗೆ :—ಮದ್ರಾಸು ಮತ್ತು ದಕ್ಷಿಣ ಮರಾಟಾ ರೈಲ್ವೆಯ ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚೂರು, ದಕ್ಷಿಣ ಇಂಡಿಯ್ಯ ರೈಲ್ವೆಯ ಪೋಲೂರು, ಅಗರಂ, ಸಿಬ್ಬಂದಿ, ತಿರಿಂಜಪುರಂ, ತಿರುವಣ್ಣಾಮಲೆ ತಾಂಡರೆ ಮತ್ತು ತಿರುಕೊಯಿಲೂರು ಸ್ಟೇಷ್ಯಗಳಿಗೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

ತಾರೀಖು 2ನೆ ನವಂಬರ್ 1909.

ನಂ. 3863—ಮ್ಯು. 54-09-12, ಶ್ರೀರಂಗಪಟ್ಟಣದ ಟವರ್ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಇದರಡಿ ನಮೂದಿಸಿರುವ ದೊಡ್ಡ ಮನುಷ್ಯರನ್ನು ಚುನಾಯಿಸಿದೆ ಯಾ ನೇಮಿಸಿದೆ.

I. 10 (1) (a)ನೆಯ ಪ್ರಕರಣದ ನೇರೆಗೆ ಚುನಾಯಿಸಲ್ಪಟ್ಟವರು :—

1. ಮಿ॥ ಎನಸಪ್ಪನವರು.
2. ,, ಬಿ. ನರಸಿಂಗರಾಯರು.
3. ,, ಕಾವೇರಾಯರು.
4. ,, ಕೃಷ್ಣಾಚಾರ್ರು.

A. 10 (1) (b) (i)ನೆಯ ಪ್ರಕರಣದ ಮೇರೆ ನೇಮಿಸಲ್ಪಟ್ಟವರು.

1. ಮಿ॥ ನಂಜುಂಡಶೆಟ್ಟರು.
2. ,, ನಂಜೆ ದೇವರು.
3. ಫಾದರ್ ಡಿ. ಎಫ್. ಲಾರೆಂಟ್‌ರವರು.
4. ಮಿ॥ ಮುಸ್ತಾಫ ಹುಸೇರವರು.
5. ,, ಎಂ. ಸುಬ್ಬಾಯ ಮೊದಲಿಯಾರು.

B. 10 (1) (b) (ii)ನೆಯ ಪ್ರಕರಣದ ಮೇರೆಗೆ ನೇಮಿಸಲ್ಪಟ್ಟವರು.

1. ,, ಫೈರ್‌ಬ್ರಾಕ್ಸ್ ಸಬ್ ಡಿವಿಜನಿನ ಸಬ್ ಡಿವಿಜನಲ್ ಅಸಿಸ್ಟೆಂಟ್ ಕಮಿಷನರವರು, (ಪ್ರೆಸಿಡೆಂಟರು).
2. ,, ಶ್ರೀರಂಗಪಟ್ಟಣದ ಅಮಲ್ದಾರ್‌ರವರು, (ವೈಸ್ ಪ್ರೆಸಿಡೆಂಟರು).
3. ,, ಮ್ಯುನಿಸಿಪಾಲಿಟಿಯಲ್ಲಿ ವಾಸಮಾಡುವ ಸೀನಿಯರ್ ಮೆಡಿಕಲ್ ಆಫಿಸರ್.
4. ,, ತಾಲ್ಲೂಕಿನ ಮರಹಮ್ಮತ್ ಇಲಾಖೆಯ ಮೇಲ್ವಿಚಾರಣೆ ಹುದ್ದೇದಾರರು.
5. ,, ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರು.

C. 10 (2)ನೆಯ ಪ್ರಕರಣದ ಮೇರೆಗೆ ನೇಮಿಸಲ್ಪಟ್ಟವರು.

ಮಿ॥ ಕೃಷ್ಣಯ್ಯನವರು.

ತಾರೀಖು 3ನೆ ನವಂಬರು 1909.

ನಂ. 3869—ಮ್ಯು. 54-09-13, ಇದರಡಿ ಕಂಡ ದೊಡ್ಡಮನುಷ್ಯರುಗಳು ಹುಣಸೂರು ಟವ್ನ್ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ ಅಥವಾ ನೇಮಿಸಲ್ಪಟ್ಟು ಇರುತ್ತಾರೆ.

I. ಚುನಾಯಿಸಲ್ಪಟ್ಟವರು ಪ್ರಕರಣ 10 (1) (a)

1. ಮಿ॥ ಎಚ್. ಎಸ್. ರಾಘವೇಂದ್ರರಾಯರು.
2. ,, ಅಬ್ದುಲ್‌ರಜಾಕ್ ಸಾಹೇಬರವರು.
3. ,, ಕಲ್ಕುಣಿಕೆ ಸಿದ್ದಯ್ಯನವರು.
4. ,, ಹೈದರ್‌ಖಾರವರು.

II. ನೇಮಿಸಲ್ಪಟ್ಟವರು 10 (1) (b), (i)

1. ಮಿ॥ ಪಟ್ಟಣೆ ಯವರು.
2. ,, ತ್ವೇಟ್ಸ್ ರವರು.
3. ,, ಅಪ್ಪಯ್ಯಶಾಸ್ತ್ರಿಗಳು.
4. ,, ತಿರುವೆಂಗಡವೊದಲಿಯಾರ್‌ವರು.
5. ,, ಮಿರ್ಜಾ ಇಸ್ಮಾಯಿಲ್‌ಬೇಗ್‌ರವರು.

ಬಿ. ಪ್ರಕರಣ 10 (1) (b) (ii) ಮೇರಿಗೆ

1. ಅಸಿಸ್ಟೆಂಟ್ ಕಮಿಷನರ್, ಮೈಸೂರು ಸಬ್ ಡಿವೀಜ್ (ಪ್ರೆಸಿಡೆಂಟರವರು).
2. ಅಮಲ್ದಾರ್, ಹುಣಸೂರು ತಾಲ್ಲೂಕು (ವೈಸ್ ಪ್ರೆಸಿಡೆಂಟರವರು).
3. ಮರಹಮ್ಮತ್ ಇಲಾಖೆ ಸಬ್ ಡಿವೀಜ್ ಆಫಿಸರವರು, ಹುಣಸೂರು.
4. ಹುಣಸೂರು ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಮೆಡಿಕಲ್ ಆಫಿಸರವರು.
5. ಸಬ್ ರಿಜಿಸ್ಟ್ರಾರ್‌ರವರು, ಹುಣಸೂರು.

ಸಿ. ಪ್ರಕರಣ 10 (2) ರ ಪ್ರಕಾರ.

ಮಿ॥ ಸಂಜೀವಶೆಟ್ಟಿಯವರು.

ತಾರೀಖು 3ನೆ ನವಂಬರ್ 1909.

ನಂ. 3874—ಮ್ಯು. 59-09-6, ಇದರಡಿ ಕಂಡ ದೊಡ್ಡ ಮನುಷ್ಯರುಗಳು, ತರೀಕೆರೆ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ, ಅಥವಾ ನೇಮಿಸಲ್ಪಟ್ಟು ಇರುತ್ತಾರೆ.

I. ಚುನಾಯಿಸಲ್ಪಟ್ಟವರು, ಪ್ರಕರಣ 10 (1) (a) ಪ್ರಕಾರ.

1. ಮಿ॥ ಅತ್ತಿಗನಾಳ್ ರಾವುರಾಯರು.
2. ,, ಮಿಸ್ ಮಹಮ್ಮದ್ ಸಾಹೇಬರು.
3. ,, ವೆಂಕಟರಾಯರು.
4. ,, ಆದಿನಾರಾಯಣಪ್ಪ ಶೆಟ್ಟಿಯವರು.
5. ,, ಬಾಬಾಸಾಹೇಬರು.

II. ನೇಮಿಸಲ್ಪಟ್ಟವರು A. ಪ್ರಕರಣ 10 (1) (b) (i) ಪ್ರಕಾರ.

1. ಮಿ॥ ಪಟೇಲ್ ಶಿವಪ್ಪನವರು.
2. ,, ಲಕ್ಷ್ಮೀನಾರಣಪ್ಪನವರು.
3. ,, ಉಪ್ಪಾರ ಯಲ್ಲಣ್ಣನವರು.
4. ,, ಖಾಸಿಂಖಾರವರು.
5. ,, ವೆಂಕಟರಮಣಯ್ಯನವರು.

B. ಪ್ರಕರಣ 10 (1) (b) (ii) ಮೇರಿಗೆ.

1. ತರೀಕೆರೆ ಚಾರ್ಜಿನಲ್ಲಿರುವ ಸಬ್ ಡಿವೀಜನಲ್ ಅಸಿಸ್ಟೆಂಟ್ ಕಮಿಷನರವರು, (ಪೆಸಿಡೆಂಟರವರು).
2. ತರೀಕೆರೆ ತಾಲ್ಲೂಕು ಅಮಲ್ದಾರ್ರವರು, (ವೈಸ್ ಪೆಸಿಡೆಂಟರು).
3. ಸಬ್ ಡಿವೀಜನಲ್ ಆಫಿಸರು, ಮರಹಂಮತ್ ಇಲಾಖೆ, ತರೀಕೆರೆ.
4. ಆಸ್ಪತ್ರೆ ಅಸಿಸ್ಟೆಂಟರು, ತರೀಕೆರೆ.
5. ಸ್ಪೆಷಲ್ ಸಬ್ ರಿಜಸ್ಟ್ರಾರವರು, ತರೀಕೆರೆ.

ತಾರೀಖು 3ನೆ ನವೆಂಬರು 1909.

ನಂ. 3876—ಲೋಕಲ್ ಬೋರ್ಡ್ 58-09, ಸ್ಯ 1906ನೆ ಇಸವಿಯ VIIನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಇಪ್ಪರಡಿಕಂಡ ದೊಡ್ಡವನುಷ್ಯರುಗಳು ಮೂರು ವರ್ಷದ ಕಾಲದ ತನಕ ತಿವಮೊಗ್ಗ ಮ್ಯುನಿಸಿಪಾಲಿಟಿಯ ಕೌನ್ಸಿಲರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ:—

1. ಮಿ॥ ಎಸ್. ಆರ್. ಬಾಲಕೃಷ್ಣರಾಯರು, ಬಿ.ಎ., ಬಿ.ಎಲ್., ಅಡ್ವೊಕೇಟ್.
2. ,, ಸಿ. ಸುಬ್ಬರಾಯರು, ಬಿ.ಎ., ಬಿ.ಎಲ್., ಅಡ್ವೊಕೇಟ್.
3. ,, ಕೆ. ಶಂಕರನಾರಾಯಣರಾಯರು, ಎಂ.ಎ., ಬಿ.ಎಲ್., ಅಡ್ವೊಕೇಟ್.
4. ,, ಬಾಪ್ಪು ರಾಜಾರಾಯರು, ಸಾಹುಕಾರು.
5. ,, ಸೀತಾರಾಮಯ್ಯನವರು, ಅಡ್ವೊಕೇಟ್.
6. ,, ಬಿ. ಗರುಡಾಚಾರ್ಯರು, ಬಿ.ಎ., ಬಿ.ಎಲ್., ಅಡ್ವೊಕೇಟ್.

ತಾರೀಖು 4ನೆ ನವೆಂಬರು 1909.

ನಂ. 3878—ಮ್ಯು. 54-09-14, 1906ನೆ ಇಸವಿ 7ನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 10 ಮತ್ತು 11ನೆ ಪ್ರಕರಣಗಳ ಮತ್ತು ಈ ರೆಗ್ಯುಲೇಷನ್ ಅನುಸರಿಸಿ ಸಾದರ್ಪಡಿಸಲ್ಪಟ್ಟ ನಿಬಂಧನೆಗಳ ಮೇರಿಗೆ, ಇಪ್ಪರಡೀ ಕಂಡ ದೊಡ್ಡ ಮನುಷ್ಯರುಗಳು, ನಂಜನಗೂಡು ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ. ಅಥವಾ ನೇಮಿಸಲ್ಪಟ್ಟು ಇರುತ್ತಾರೆ:

I. 10 (1) (a) ಪ್ರಕರಣ ಪ್ರಕಾರ ಚುನಾಯಿಸಲ್ಪಟ್ಟವರು.

1. ಮಿ॥ ಕೆ. ವೆಂಕಟಶಾಮಿ ಅಯ್ಯರ್, ಬಿ.ಎ., ಬಿ.ಎಲ್. ರವರು, ಅಡ್ವೊಕೇಟ್.
2. ,, ಇ. ರಾಮರಾಯರು, ಜಮೀನ್ದಾರು.
3. ,, ಬಿ. ಸುಬ್ಬರಾಯರು, ಪ್ಲೀಡರ್.
4. ,, ಚಿಕ್ಕ ಪುಟ್ಟುಸಾಮಿ ಶೆಟ್ಟರವರು, ವರ್ತಕರು.
5. ,, ಬಿ. ನಂಜುಂಡಾ ಆರಾಧ್ಯರ್, ಪ್ಲೀಡರ್.

II. ನೇಮಿಸಲ್ಪಟ್ಟವರು A. ಪ್ರಕರಣ 10 (1) (b) (i) ಪ್ರಕಾರ.

1. ಮಿ॥ ಸಿ. ಗುರುರಾಯರು, ಪ್ಲೀಡರ್ ಮತ್ತು ಜಮೀನ್ದಾರು.
2. ,, ಚಂಗಾಲರಾಯ ಮೊದಲಿಯಾರು, ರಿಟೈರಾದ ಹಾನರೆರಿ ಅಸಿಸ್ಟೆಂಟ್ ಸರ್ಜನ್.
3. ,, ವಿ. ಬಂಡಪ್ಪನವರು, ವರ್ತಕರು.
4. ,, ಅಹಮ್ಮದ್ ಸಾಹೇಬರು, ವರ್ತಕರು.
5. ,, ನಾಯಿಕ ನರಸಿಂಹಾಚಾರ್ಯರು, ಏಜಂಟ್ ಶ್ರೀಕಂಠೇಶ್ವರ ಬ್ಯಾಂಕು.

B. ಪ್ರಕರಣ 10 (1) (b) (ii) ಪ್ರಕಾರ.

1. ಅಸಿಸ್ಟೆಂಟ್ ಕಮಿಷನರ್ ನಂಜನಗೂಡು ಸಬ್ ಡಿವಿಜನ್ (ಪೆಸಿಡೆಂಟ್).
2. ಅಮಲ್ದಾರ್ ನಂಜನಗೂಡು ತಾಲ್ಲೂಕು (ವೈಸ್ ಪೆಸಿಡೆಂಟ್).
3. ಸಬ್ ರಿಜಸ್ಟ್ರಾರ್ ನಂಜನಗೂಡು ತಾಲ್ಲೂಕು.
4. ಮರಹಂಮತ್ ಸಬ್ ಡಿವೀಜನ್ ಆಫಿಸರವರು, ನಂಜನಗೂಡು ಸಬ್ ಡಿವೀಜನ್.
5. ನಂಜನಗೂಡು ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಮೆಡಿಕಲ್ ಆಫಿಸರವರು.

ತಾರೀಖು 10ನೆ ನವೆಂಬರ್ 1909.

ನಂ. 4042—Med. 85-09-4, ಸ॥ 1894ನೆಯ ವರ್ಷದ 7ನೆ ನಂಬರ್ ಆಕ್ಟ್‌ಜಿಷನ್ ರಿಗ್ಯುಲೇಷನ್ 6ನೆಯ ಪ್ರಕರಣವನ್ನು ಸನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಲ್ಲಿ ವಿವರಿಸುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಅನಪತ್ಯ ಕಳ್ಳುವದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರಿಗ್ಯುಲೇಷನ್ 7 ನೆಯ 3 (ಎ) ಪ್ರಕರಣಗಳನ್ನು ಸನುಸರಿಸಿ ನಂಜನಗೂಡು ತಿರ್ಪಿ ಚಾರ್ಜಿನಲ್ಲಿರುವ ಅಸಿಸ್ಟೆಂಟು ಕಮಿಷನರಿಗೆ ಸದರಿ ಜಮೀನನ್ನು ಹೊಂದುವದಕ್ಕೆ ಕ್ರಮವು ಜರಿಗಿಸಲು ಅಧಿಕಾರ ಕೊಟ್ಟಿದೆ.

ನಂಬರು.	ತಾಲ್ಲೂಕು.	ಹೋಬಳಿ.	ಗ್ರಾಮದ ಯಾ ಮನೆಯ ಲೆಕ್ಕದ ಹೆಸರು.	ಸರ್ವೆ ನಂಬರು.	ಹುಲ್ಲುಮನೆ, ಪಾಲಿನಿರೀಕ್ಷಣ, ಹೆಂಚಿನ ಮನೆ ಮತ್ತು ಮಿಕ್ಕಿದ್ದು	ಒಟ್ಟು ವಿಸ್ತೀರ್ಣ		ಹೊಲ ಮತ್ತು ತೋಟದ ವಿಸ್ತೀರ್ಣ		ಹಿಡುವಳಿ ಮಾಡುವವರ ಹೆಸರು.	ಜಾತಿ.	ಜಮೀನಿನ ಹದ್ದು.			ಉತ್ತರ.	ಪಶ್ಚಿಮ.
						ಎ.	ಗು.	ಎ.	ಗು.							
1	ನಂಜನಗೂಡು	ಕಸಬಾ	ತಮಟೆ ಜವನನ ಹೆಂಡತಿ ಚಿಕ್ಕಿ.	...	ಹುಲ್ಲುಮನೆ ...	109	0	169	0	...	...	...	...	ಚನ್ನಪಿಳ್ಳೆ ಮನೆ	ಹುಚ್ಚಿ ಮನೆ	ಚಿಕ್ಕಿ ಮನೆ
2	,,	,,	ರಾಚನ ಹೆಂಡತಿ ಹುಚ್ಚಿ ,,	...	ಪಿಟಿಜೀ ...	254	0	254	0	...	...	ಪಿಟಿಜೀ	...	ಪಿಟಿಜೀ	ನಂಜನ ಜಾಗ	ಹುಚ್ಚಿ ಮನೆ
3	,,	,,	ಗುಲಜನ ನಂಜ ,,	...	ಖಾಲಿನಿರೀಕ್ಷನ ಜಾಗ	185	0	185	0	...	...	ಪಿಟಿಜೀ	...	ಪಿಟಿಜೀ	ಚಲುವನ ಮನೆ	ನಂಜನ ಜಾಗ
4	,,	,,	ಬಲ್ಗೈ ಚಲುವ ,,	...	ಹುಲ್ಲುಮನೆ ..	149	0	149	0	...	...	ಚಿಕ್ಕಪ್ಪನ ಮಕ್ಕಳು ಚಿಕ್ಕ ನಂಜನ ಮಕ್ಕಳು	ಮಾದಿಗ	ಮಾರಿ ಮತ್ತು ಸಿದ್ದ ನಪ್ಪನ ಮನೆ	ಚಿಕ್ಕಪ್ಪನ ಮನೆ	ಚನ್ನಪಿಳ್ಳೆ ಮನೆ
			...	...	...	880	0	880	0	...	...			ಉಪ್ಪಾನನ ಮನೆ	ನಂಜನ ಜಾಗ	ಖಾಲಿ
5	,,	,,	ತಮಟೆ ಚಿಕ್ಕಿಯ ,,	...	ಪಿಟಿಜೀ	88	0	88	0	...	...	ಪಿಟಿಜೀ	...	ನಂ. 5 ಪಿಟಿಜೀ	ಮಲಯನ ಮನೆ	ಚಿಕ್ಕಪ್ಪನ ಮನೆ
6	,,	,,	ಚಿಕ್ಕನಂಜ ,,	...	ಖಾಲಿನಿರೀಕ್ಷನ ಜಾಗ	88	0	88	0	...	...	ಪಿಟಿಜೀ	...	ಸರ್ವೆ ನಂ. 353 ಪಿಟಿಜೀ	ಸಿದ್ದನ ಮನೆ	ನಂಜನ ಜಾಗ
7	,,	,,	ಬಲ್ಗೈ ಮಲಿಯ ,,	...	ಹುಲ್ಲುಮನೆ ...	617	0	617	0	...	...	ರಸ್ತೆ ಮತ್ತು ನಂ. 7 ರಸ್ತೆ	...	10ನೆ ನಂಬರು ಮನೆ	ರಸ್ತೆ	ಮಲಿಯನ ಮನೆ
8	,,	,,	ಅದಿಮನವನ ಸಿದ್ದ ,,	...	ಹೆಂಚುಮನೆ ...	1375	0	1375	0	...	...	ಚಿಕ್ಕ ಮತ್ತು ಹು ಡ್ಡಿನ ನಂಜ ನ ಜಾಗಕ್ಕೂ ಸೇರಿ	...	ನಂಬರು 5	ನಂಬರು 5	ರಸ್ತೆ
9	,,	,,	ಚನ್ನಪಿಳ್ಳೆ ,,	...	ಹುಲ್ಲುಮನೆ ...	591	0	591	0	...	...	ಚನ್ನಪಿಳ್ಳೆ ಮನೆ	...	11ನೆ ನಂಬರು ಮನೆ	ಸರ್ವೆ ನಂಬರು 353	ಪಿಟಿಜೀ
10	,,	,,	ಪೇಟೆಮಾರನವನ ಮತ್ತು ಹೆಣ್ಣೆ ಗುನಿದ್ದ.	...	ಪಿಟಿಜೀ ...	697	0	697	0	...	...	ಮಾರಿ ಮತ್ತು ಸಿದ್ದ ನ ಮನೆ	...	14 & 15ನೆ ನಂಬರು ಗಳ ನಡುವಿನ ಸೇರಿ ದಾರಿ ಮನೆಯಿಂದ ಸೇರಿ	ಪಿಟಿಜೀ	ಪಿಟಿಜೀ
11	,,	,,	ಚಕ್ರಹೊಟ್ಟೆಸಾಮಿ ,,	...	ಪಿಟಿಜೀ ...	994	0	994	0	...	...			ಮೊದಲನೆಮನೆ	ಸರ್ವೆ ನಂಬರು 65	ಖಾಲಿ
12	,,	,,	ನಿರಿ ,,	...	ಹೆಂಚುಮನೆ ...	224	0	224	0	...	...			ದೊಡ್ಡನ ಮನೆ	ಪಿಟಿಜೀ	ಪಿಟಿಜೀ
13	,,	,,	ಮಂಗಚಿಕ್ಕನ ದೊಡ್ಡ ,,	...	ಪಿಟಿಜೀ ...	393	0	393	0	...	...			ರಂಗನ ಮನೆ	ಗಿರೀಮನೆ	ಚಲುವನ ಮನೆ

ಸಂಖ್ಯೆ.	ಜಪ್ತಿಯಾದ ಯಾ ಮಾರಲಿಕ್ಕಿರುವ ಕರ ಹೆಸರು.	ಪ್ರಸ್ತಾವನೆಯ ಸಂಖ್ಯೆ.	ಹುಲ್ಲುಮನೆ, ಖಾಲಿ ನಿವೇಶನ, ಹೆಂಚಿನ ಮನೆ ಮತ್ತು ಮಾಳಿಗೆ ಮನೆ ಎಷ್ಟು.	ಜಪ್ತಿಯಾದ ಸ್ಥಿರಾಸ್ತಿಯ ಕಿಮ್ಮತ್ತು.			ಮಾರಲಿಕ್ಕಿರುವ ಸ್ಥಿರಾಸ್ತಿಯ ಕಿಮ್ಮತ್ತು.			ಚತುರ್ದಿಕ್ಕು.			
				ರೂ.	ಆ.	ಸಂ.	ರೂ.	ಆ.	ಸಂ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ಸೈದುಸಾಹೆಬ ತಂದೆ ಕಾಲಾಸಾಹೆ ಕುಂಟುಜವರ	...	ಹುಲ್ಲುಮನೆ ..	143	0	0	...		...	ಖಾಲಿ ಜಾಗ ಪಿಟಿಜೀ ಕಲ್ಲಾಣಿ ಮನೆ	ಕಾಲಿಜಲುವನ ಮನೆ ಪಿಟಿಜೀ	ಕುಂಟುಜವರನ ಮನೆ ಖಾಲಿ	ರಸ್ತೆ ಕಲ್ಲಾಣಿ ಮನೆ
2	ಕಾರಿಜಲುವ	...	ಪಿಟಿಜೀ ...	304	0	0	...		...	ಕಾರಿಜಲುವನ ಮನೆ	ದೊಡ್ಡ ಪುಂಜ ಖಾಲಿ	ಕುಂಟುಜವರ ಮನೆ	ರಸ್ತೆ
3	ಚಕ್ಕರಬೊಡ್ಡಿ ಪುಂಜ	...	ಪಿಟಿಜೀ ...	685	0	0	...		...	ಪಚ್ಚೆಪುಂಜನ ಮನೆ	ಪಚ್ಚೆಪುಂಜನ ಮನೆ	ಪಚ್ಚೆಪುಂಜನ ಮನೆ	ಪಿಟಿಜೀ
4	ಪುಂಜ	...	ಪಿಟಿಜೀ ...	130	0	0	...		...	ಪಚ್ಚೆಪುಂಜನ ಮನೆ & ಬಲಗೈ ಬುಕ್ಕನ ಮನೆ	ಪಿಟಿಜೀ	ಬುಕ್ಕನ ಮನೆ	ದೊಡ್ಡ ಪುಂಜನ ಮನೆ
5		...	ಪಿಟಿಜೀ ...	44	0	0	...		...				
6	ಪಚ್ಚೆ ಪುಂಜ	...	ಪಿಟಿಜೀ ...	51	0	0	...		...	ಕಾರಿಜಲುವನ ಮನೆ	ಪುಂಜಪಟನ ಖಾಲಿ		
7	ಚಕ್ಕರಬುಕ್ಕ	...	ಪಿಟಿಜೀ ...	248	0	0	...		...	ಕಾರಿಜಲುವನ ಮನೆ	ಪಿಟಿಜೀ	ಕಾಳಿಕರಂಗನ ಮನೆ	ಪಚ್ಚೆಪುಂಜ & ಪುಂಜ ಚಿ ಮನೆಗಳು
8	ಚಕ್ಕ ಕಾಳಿಕರಂಗ	...	ಪಿಟಿಜೀ ...	343	0	0	...		...	ದೊಡ್ಡ ನ ಮನೆ	ಕಾಳಿಕರಂಗನಮನೆ	ಸರ್ವೆ ನಂಬರು 65	ಬುಕ್ಕನ ಮನೆ
9	ಚಕ್ಕಪುಂಜ	...	ಪಿಟಿಜೀ ...	271	0	0	...		...	ಕಾಳಿಕರಂಗನಮನೆ	ಚಿಕ್ಕ ನಾಯಕನಮನೆ	ಪಿಟಿಜೀ	ಚಕ್ಕರಬುಕ್ಕ ಮನೆ
10	ಚಕ್ಕರಬುಕ್ಕ	...	ಪಿಟಿಜೀ ...	73	0	0	...		...	ಬುಕ್ಕನ ಮನೆ	ಪಿಟಿಜೀ	ಚಿಕ್ಕ ಪುಂಜ	ಚಿಕ್ಕರಬುಕ್ಕ ಮನೆ
11	ಚಿಕ್ಕ ಪುಂಜ	...	ಪಿಟಿಜೀ ...	524	0	0	...		...	ಚಿಕ್ಕನ ಮನೆ	ಖಾಲಿ	ಸರ್ವೆ ನಂಬರು 65	ಪುಂಜ ಮತ್ತು ಪಟನ ಮನೆಗಳು
12	ಚಿಕ್ಕಪುಂಜ	...	ಪಿಟಿಜೀ ...	50	0	0	...		...	ಪುಂಜಪಟನಮನೆ	ಚಿಕ್ಕ ನಾಯಕನಮನೆ	ಚಿಕ್ಕ ಪುಂಜನ ಮನೆ	ಚಿಕ್ಕ ಪುಂಜನ ಮನೆ
13	ಪದ್ದನ ನಾಗ ಚಕ್ಕರಬೊಡ್ಡಿ ಪಟಾರ.	...	ಪಿಟಿಜೀ ..	121¾	0	0	...		...	ಚಿಕ್ಕನ ಮನೆ	ಹೊಸಕೋಟಿ ಮಾದನ ಮನೆ	ಪಿಟಿಜೀ	ಪಿಟಿಜೀ
14	ಹೊಸಕೋಟಿ ಮಾದಿ	...	ಪಿಟಿಜೀ ...	96	0	0	...		...	ದೊಡ್ಡ ಮಾದನಮನೆ	ಪುಂಡಿಪಟನ ಮನೆ	ಪಿಟಿಜೀ	ಪಿಟಿಜೀ
15	ಗಳಿಯನ ದೊಡ್ಡನಪುಂಡಿ ನ ಮನೆ	...	ಪಿಟಿಜೀ ...	508	0	0	...		...	ಚಿಕ್ಕ ಪೆಂಡಿರನ ಮನೆ	ಚಿಕ್ಕನ ಮನೆ	ಪಿಟಿಜೀ	ಪಿಟಿಜೀ
16	ದೊಡ್ಡಿ ಚಿಕ್ಕನ ಚಿಕ್ಕಿ	...	ಪಿಟಿಜೀ ...	314	0	0	...		...	ಪುಂಡಿಪಟನಮನೆ	ರಸಾರ್ಜಯರ	ಪಿಟಿಜೀ	ಪಿಟಿಜೀ
17	ಕಾರುಪಡಿಗಾವನ ಕಂಪನ ಹೆಂಡತಿ ದೇವಿ.	65	ಖುಷ್ಕಿ ..	2	11	2	12		2	11	ಸರ್ವೆ ನಂ. 353	ಪಿಟಿಜೀ	ಖಾಲಿ	ಹೊಲಗೇರಿ
18	ಮಾಲಿಗಾಡ ಬಿಳಿ ಪುಟ್ಟಿಗೌಡ.	353	ಪಿಟಿಜೀ ..	0	10	0	10	0	4	0	10	ಸರ್ವೆ ನಂಬರು 65 ಇವರಿಗಳ ಮನೆ ಮತ್ತು ಖಾಲಿ ಜಾ	ಪಿಟಿಜೀ	ಪಿಟಿಜೀ	ಪಿಟಿಜೀ

ತಾರೀಖು 10ನೆ ನವೆಂಬರ್ 1909.

ನಂ. 4046—ಲೋ. ಬೋ. 320-18-4, ಸ್ರ 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ ರೆಗ್ಯುಲೇಷ್ನ ಅನುಸರಿಸಿ ವಿಧಾಯಿಸಿರುವ ನಿಬಂಧನೆಗಳ 6ನೆ ಪ್ಯಾರಾದ ಮೇರೆಗೆ ಇದರಡೀಕಂಡ ಯೂನಿಯರ್ಡ್‌ಗಳಲ್ಲಿರುವ ಸ್ಕೂಲುಗಳ ಹೆಡ್ಮಾಸ್ಟರುಗಳನ್ನು ಸದರಿ ಪಂಚಾಯಿತಿಗಳ ಮೆಂಬರುಗಳನ್ನಾಗಿ ನೇಮಿಸಿದೆ.

1. ಕೆಂಗೇರಿ	3. ದೊಮ್ಮಸಂದ್ರ
2. ಎಲಹಂಕ	4. ಸೂಳಿಬೆಲೆ

ತಾರೀಖು 10ನೆ ನವೆಂಬರ್ 1909.

ನಂ. 4052—ಮೆಡಿಕಲ್ 82—09—2, ಮೈಸೂರು ಸರ್ವಿಸ್ಸು ರೆಗ್ಯುಲೇಷನ್ನಿನ 177ನೆ ಪ್ರಕರಣದ ಮೇರೆಗೆ, ಬೆಂಗಳೂರು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರರಾದ ಮಿ|| ಜಿ. ಎಸ್. ಡೇವಿಡ್‌ರವರಿಗೆ 1909ನೆ ಇಸವಿ ಅಕ್ಟೋಬರ್ 7ನೆ ತಾರೀಖು ಲಾಗಾಯಿತು 4 ದಿನಗಳ ಪ್ರಿವಿಲೇಜು ರಜಾ ಕೊಡಲಾಯಿತು.

ಮಿ|| ಜಿ. ಎಸ್. ಡೇವಿಡ್‌ರವರು ರಜಾದಮೇಲೆ ಗೈರ್ಹಾಜರಾಗಿದ್ದ ಕಾಲದಲ್ಲಿ, ಆಕ್ಟಿಂಗ್ ಕೆಮಿಕಲ್ ಎಗ್ಜಾಮಿನರ್ ಮತ್ತು ಕ್ರಿಮಿ ಶಾಸ್ತ್ರಜ್ಞರಾದ ಮಿ|| ಎ. ಕೆ. ಪಾಣಿಯವರು ತಮ್ಮ ಕೆಲಸದೊಂದಿಗೆ, ಬೆಂಗಳೂರು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರರ ಕೆಲಸದ ಚಾರ್ಜನ್ನು ವಹಿಸಿ ಇದ್ದರು.

ತಾರೀಖು 12ನೆ ನವೆಂಬರ್ 1909.

ನಂ. ಜ. 2592—ಜ್ಯು. ಮಿ. 42—09 31, ಅಸಿಸ್ಟೆಂಟ್ ಕಮಿಷನರ್ ಮಿ|| ಎ. ವೇದಾಂತದೇಶಿಗಂ ಅಯ್ಯಂಗಾರ್‌ರವರು ಬಿ. ಷೆಡ್ಯೂಲಿನ 5ನೆ ತರಗತಿಯಲ್ಲಿ 3 ವರುಷಕಾಲ ತೃಪ್ತಿಕರವಾಗಿ ಕೆಲಸ ಮಾಡಿರುವುದರಿಂದ, ಇವರಿಗೆ 1909ನೆ ಇಸವಿ ಜೂನ್ ಮಾಹೆ 18ನೆ ತಾರೀಖು ಲಾಗಾಯಿತು 4ನೆ ತರಗತಿಗೆ ಬಡತಿ ಕೊಟ್ಟಿದೆ.

ತಾರೀಖು 8ನೆ ನವೆಂಬರ್ 1909.

ನಂ. ಫೈ. 2256—ಜ. ಫೈ. 159 09, ಅಸಿಸ್ಟೆಂಟ್ ಕಂಟ್ರೋಲರ್ ಮಿ|| ಬಿ. ಶ್ರೀನಿವಾಸೈಯ್ಯಂಗಾರ್, ಬಿ ಎ., ಬಿ.ಎಲ್. ರವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ 177ನೆಯ ಪ್ರಕರಣದ ಮೇರೆಗೆ 1909ನೆ ಇಸವಿ ಅಕ್ಟೋಬರು ಮಾಹೆ 16ರ ಲಾಗಾಯಿತು 20ರ ವರಿಗೆ ಐದು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ತಾರೀಖು 27ನೆ ಸೆಪ್ಟಂಬರ್ 1909.

ನಂ. ರೆ. 2706—ಫಾರೆಸ್ಟ್ 192-08-5, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಫಾರೆಸ್ಟ್ ರೆಗ್ಯುಲೇರ್ಷ (1900ನೆ ಇಸವಿ XIನೆ ನಂಬರ್ ರೆಗ್ಯುಲೇರ್ಷ) 4ನೆ ಪ್ರಕರಣವನ್ನು ಅನುಸರಿಸಿ ಇದರಡಿ ನಮೂದಿಸಿರುವ ಚಕ್ಕು ಬಂದಿವುಳ್ಳ ಪ್ರದೇಶವನ್ನು ಮನ್ನಾಜಂಗಲಿಯಾಗಿ ಮಾಡಬೇಕೆಂದು ಮೈಸೂರು ಶ್ರೀಮ ಮಹಾರಾಜಾ ಸರ್ಕಾರದವರು ಉದ್ದೇಶಿಸಿರುತ್ತಾರೆ.

ಚಕ್ಕು ಬಂದಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸರ್ವೆ ನಂಬರು ವಿಸ್ತೀರ್ಣ.	ಬ್ಲಾಕಿನ ಹೆಸರು.	ವಿವರಣೆ.
ನೈಸೂರು	ಗುಂಡ್ಲುಪೇಟೆ	ನಂ. ಸರ್ವೆ. 1,952 37	ಕಣಿಯನಪುರ ರಿಜರ್ವ್ಡ್ ಬ್ಲಾಕ್ I	ಇರುವ ಪ್ರದೇಶ—ಬಂಡೀಪುರ ಸ್ಟೇಟ್ ಫಾರೆಸ್ಟಿಗೆ ಪೂರ್ವ ದಿಕ್ಕಿನಲ್ಲಿರುವ ಕುರುಚೆ ಕಾಡು ಪ್ರದೇಶ. ಚಕ್ಕು ಬಂದಿ. ಉತ್ತರಕ್ಕೆ—ಬೇರಂಬಾಡಿ ಗ್ರಾಮ ಮತ್ತು ಬೇರಂಬಾಡಿ ಮನ್ನಾ ಜಂಗಲಿಗಳ ಮಧ್ಯೆ ಸರಹದ್ದು ಕೂಡುವ ಬಾಂದಿನಿಂದ ಲೈನು ಷುರೂ ಆಗಿ ಲಕ್ಕಿಪುರದ ಗ್ರಾಮದ ಸರ್ವೆ 11ನೆ ನಂಬರಿನ ಮಾರ್ಗವಾಗಿ ಆಗ್ನೇಯಕ್ಕೆ $5\frac{3}{4}$ ಫರ್ಲಾಂಗು ಹೋಗಿ, ಲಕ್ಕೀಪುರ ಮತ್ತು ಗೋಪಾಲಪುರ ಗ್ರಾಮಗಳ ಸರಹದ್ದು ಲೈನನ್ನು ಸಂಧಿಸುತ್ತದೆ. ಅಲ್ಲಿಂದ ಗೋಪಾಲಪುರದ ಸರ್ವೆ 143 & 142ರ ಮಾರ್ಗವಾಗಿ $4\frac{1}{4}$ ಫರ್ಲಾಂಗು ಹೋಗಿ ಗೋಪಾಲಪುರ ಮತ್ತು ಕುಣಗಹಳ್ಳಿ ಗ್ರಾಮಗಳ ಸರಹದ್ದು ಲೈನನ್ನು ಸದರಿ ಗ್ರಾಮಗಳ ದಕ್ಷಿಣ ಬಾಂದಿನಿಂದ $10\frac{1}{2}$ ಫರ್ಲಾಂಗು ಫಾಸಲೆಯಲ್ಲಿ ಸೇರುತ್ತದೆ. ಅಲ್ಲಿಂದ ಅದೇ ಮಾರ್ಗವಾಗಿ, $6\frac{3}{4}$ ಫರ್ಲಾಂಗು ಫಾಸಲೆ, ಕುಣಗಹಳ್ಳಿ ಗ್ರಾಮದ 39 ಮತ್ತು 19ನೆ ಸರ್ವೆ ನಂಬರುಗಳ ಮಾರ್ಗವಾಗಿ ಹೋಗಿ ಕುಣಗಹಳ್ಳಿ ಮತ್ತು ಕಳ್ಳಿಪುರ ಗ್ರಾಮಗಳ ಮಧ್ಯೆ ಸರಹದ್ದು ಲೈನನ್ನು ಕಳ್ಳಿಪುರದ ಸರ್ವೆ 52ನೆ ನಂಬರಿನ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ $4\frac{1}{4}$ ಫರ್ಲಾಂಗು ಫಾಸಲೆಯಲ್ಲಿ ಸಂಧಿಸುತ್ತದೆ. ಅಲ್ಲಿಂದ $4\frac{1}{4}$ ಫರ್ಲಾಂಗು ದೂರ ಅದೇ ಸರಹದ್ದು ಲೈನು ಅನುಸರಿಸಿ ನೈರುತ್ಯ ದಿಕ್ಕಿಗೆ ಹೋಗಿ ಕಳ್ಳಿಪುರದ ಸರ್ವೆ 52ನೆ ನಂಬರು ನೈರುತ್ಯ ಮೂಲೆಯನ್ನು ಸಂಧಿಸುತ್ತದೆ, ಅಲ್ಲಿಂದ ಅದೇ ಸರ್ವೆ ನಂಬರು ದಕ್ಷಿಣ ಸರಹದ್ದು ಮಾರ್ಗ ಅನುಸರಿಸಿ, ಹಂಗಳಹೊಸಹಳ್ಳಿ ಸರ್ವೆ 57ನೆ ನಂಬರು ನೈರುತ್ಯ ಮೂಲೆಯನ್ನು ಸಂಧಿಸುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯವಾಗಿ 11 ಫರ್ಲಾಂಗು ಘಾಸಲೆ ಅದೇ ಗ್ರಾಮದ ಸರ್ವೆ 85ನೆ ನಂಬರು ಪಶ್ಚಿಮ ಸರಹದ್ದಿನ ಮಾರ್ಗವಾಗಿ ಹೋಗಿ ಹಂಗಳಹೊಸಹಳ್ಳಿ, ಸಿದ್ದಯ್ಯನಪುರದ ಗ್ರಾಮಗಳ ಮತ್ತು ಬಂಡೀಪುರದ ಮನ್ನಾ ಜಂಗಲಿಯ ಬಾಬ್ತು ಮಾದಗಿತ್ತಿ ದುರ್ಗದ ಮೇಲಿರುವ ಮುಕ್ತುಪ್ಪೆ ಬಾಂದಿಗೆ ಸೇರುತ್ತದೆ.

ದಕ್ಷಿಣಕ್ಕೆ—ನಂತರ ವಾಯವ್ಯಕ್ಕೆ ತಿರಗಿ, ಬಂಡೀಪುರದ ಮನ್ನಾ ಜಂಗಲಿ ಸರಹದ್ದು ಮಾರ್ಗವಾಗಿ ಹೋಗಿ ಗೋಪಾಲಪುರ ಮತ್ತು ಕುಣಗಹಳ್ಳಿ ಗ್ರಾಮಗಳ ಗಡಿ ಬಾಂದನ್ನು ಸೇರಿ, ಅಲ್ಲಿಂದ ವಾಯವ್ಯಾಭಿಮುಖವಾಗಿ ಅದೇ ಸರಹದ್ದಿನಲ್ಲಿ ಹೊರಟು ಗೋಪಾಲಪುರ ಮತ್ತು ಲಕ್ಕೀಪುರದ ಗ್ರಾಮಗಳ ಮತ್ತು ಬೇರಂಬಾಡಿ ಮತ್ತು ಬಂಡಿಪುರ ಮನ್ನಾ ಜಂಗಲಿಗಳ ಗಡಿ ಬಾಂದನ್ನು ಸೇರುತ್ತದೆ.

ಪಶ್ಚಿಮಕ್ಕೆ—ನಂತರ ಉತ್ತರಾಭಿಮುಖವಾಗಿ ಬೇರಂಬಾಡಿ ಮನ್ನಾ ಜಂಗಲಿಯ ಎಲ್ಲೆಯನ್ನು ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಮಿ|| ಸಿ. ವೆಂಕಟರಾವ್, ಬಿ.ಎ. ಯವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವ ನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ರಾಡಲೂ, ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸರ್ಕಾರ್ ತರಫು ಕುಮ್ಕೆಕವಾಡಲು ಹಾಜರಾಗುವಂತೆ ಮೊಕರರ್ರಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪ್ಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 27ನೆ ಸೆಪ್ಟಂಬರ್ 1909.

ನಂ. ರೆ. 2709—ಫಾರೆಸ್ಟ್ 192–0 –6, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಫಾರೆಸ್ಟ್ ರೆಗ್ಯುಲೇಷನ್ (1900ನೆ ಇಸವಿ XIನೆ ನಂಬರ್ ರೆಗ್ಯುಲೇಷನ್) 4ನೆ ಪ್ರಕರಣವನ್ನು ಅನುಸರಿಸಿ ಇದರಡೀ ನಮೂದಿಸಿರುವ ಚಕ್ಕುಬಂದಿ ಉಳ್ಳ ಪ್ರದೇಶವನ್ನು ಮನ್ನಾ ಜಂಗಲಿಯಾಗಿ ಮಾಡಬೇಕೆಂದು ಮೈಸೂರು ಶ್ರೀಮರ್ ಮಹಾರಾಜಾ ಸಾಹೇಬ್ಬ ಹದೂರ್‌ರವರ ಸರಕಾರದವರು ಉದ್ದೇಶಿಸಿರುತ್ತಾರೆ.

ಚಕ್ಕುಬಂದಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ವಿವರ.
ಮೈಸೂರು.	ಗುಂಡ್ಲುಪೇಟೆ.	ಹಂಗಳ.	8,665 ಎಕರೆ, 37 ಗುಂಟೆ.	ಕಣಿಯನಪುರದ ರಿಜರ್ವ್ಡ್ ಬ್ಲಾಕು II.	ಇರುವ ಪ್ರದೇಶ—ಬಂಡಿಪುರದ ಮನ್ನಾ ಜಂಗಲಿಗೆ ಪೂರ್ವದಲ್ಲಿರುವ ಜಂಗಲ್ ಪ್ರದೇಶ.

ಚಕ್ಕುಬಂದಿ.

ಉತ್ತರ—ಮಾದಗಿತ್ತಿ ದುರ್ಗದ ಮೇಲಿರುವ ಕಳ್ಳಿಪುರ, ಹಂಗಳ ಹೊಸಹಳ್ಳಿ ಮತ್ತು ಸಿದ್ದಯ್ಯನಪುರ ಗ್ರಾಮಗಳ ಮತ್ತು ಬಂಡೀಪುರದ ಮನ್ನಾ ಜಂಗಲಿಯ ಗಡಿ ಬಾಂದಿನಿಂದ ಲೈ ಹೊರಟು $12\frac{3}{4}$ ಫರ್ಲಾಂಗು ಘಾಸಲೆ ಸಿದ್ದಯ್ಯನಪುರದ ಸರ್ವೆ 83ನೆ ನಂಬರಿನ ದಕ್ಷಿಣ ಸಂಹದ್ದನ್ನು ಅನುಸರಿಸಿ ಪೂರ್ವಾಭಿಮುಖವಾಗಿ ಹೋಗುತ್ತದೆ, ಅಲ್ಲಿಂದ ಆಗ್ನೇಯವಾಗಿ $3\frac{1}{4}$ ಫರ್ಲಾಂಗು ಘಾಸಲೆ ಹೋಗಿ ಮೇಲಕಾಮನಹಳ್ಳಿ ಗ್ರಾಮದ ಸರ್ವೆ 1ನೆ ನಂಬರು ನೈರುತ್ಯ ದಿಕ್ಕಿನ ಮೂಲೆಯಿಂದ ನೈರುತ್ಯಕ್ಕೆ ಸುಮಾರು $\frac{1}{2}$ ಫರಲಾಂಗು ಘಾಸಲೆಯಲ್ಲಿರುವ ಒಂದು ಫಾರೆಸ್ಟು ಮಾರ್ಕಿಗೇ ಸೇರುತ್ತದೆ, ಅಲ್ಲಿಂದ ಆಗ್ನೇಯಾಭಿಮುಖವಾಗಿ $6\frac{1}{4}$ ಫರ್ಲಾಂಗು ದೂರದಲ್ಲಿ ಮೇಲಕಾಮನಹಳ್ಳಿಯ ಸರ್ವೆ 2ನೆ ನಂಬರು ನೈರುತ್ಯ ಮೂಲೆಯನ್ನು ಮುಟ್ಟಿ, ಮೈಸೂರು-ನೀಲಗಿರಿ ರಸ್ತೆಯ 132ನೆ ಮೈಲಿ 1ನೆ ಫರ್ಲಾಂಗು ಸೇರುತ್ತದೆ. ಅಲ್ಲಿಂದ ಆಗ್ನೇಯಾಭಿಮುಖವಾಗಿ 6 ಫರಲಾಂಗು ಘಾಸಲೆ ಬಂಡೀಪುರದ ಡಿಸ್ಟ್ರಿಕ್ಟು ಫಾರೆಸ್ಟು ಮಾರ್ಗವಾಗಿ ಹೊರಟು ಸಿದ್ದಾಪುರದ ವಾಯವ್ಯ ಮೂಲೆಯನ್ನು ಸೇರುತ್ತೆ; ನಂತರ ಸಿದ್ದಾಪುರ, ಶಿವಪುರ, ಮತ್ತು ಹುಂಡಿಪುರ ಗ್ರಾಮಗಳ ಪಶ್ಚಿಮ ಗಡಿಯನ್ನನುಸರಿಸಿ ಹುಂಡಿಪುರದ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಪೂರ್ವವಾಗಿ ಸದರೀ ಗ್ರಾಮದ ದಕ್ಷಿಣ ಗಡಿಯನ್ನನುಸರಿಸಿ ಕಬ್ಬಾಪುರ ಸರ್ವೆ ನಂ 77ರ ವಾಯವ್ಯ ಮೂಲೆಯನ್ನು ಸೇರುತ್ತದೆ.

ಪೂರ್ವಕ್ಕೆ—ಇಲ್ಲಿಂದ ಆಗ್ನೇಯಕ್ಕೆ ಕಬ್ಬಾಪುರದ ಸರ್ವೆ 77ನೆ ನಂಬರು ಮಾರ್ಗವಾಗಿ 9½ ಫರ್ಲಾಂಗು ಹೋಗಿ ಅದೇ ಗ್ರಾಮದ ಸರ್ವೆ 1 8ನೆ ನಂಬರು ನೈರುತ್ಯ ಮೂಲೆಯನ್ನು ಸೇರಿ, ಅದೇ ದಿಕ್ಕಿನಲ್ಲಿ ಕಬ್ಬಾಪುರ, ಜಕ್ಕಹಳ್ಳಿ ಮತ್ತು ಮಂಗಲ ಗ್ರಾಮಗಳ ಮುಗ್ಗಡಿ ಬಾಂದನ್ನು ಮುಟ್ಟುತ್ತದೆ. ವಾಯುವ್ಯವಾಗಿ ಮಂಗಳದ 59ನೆ ನಂಬರಿನ ಉತ್ತರ ಗಡಿಯನ್ನನುಸರಿಸಿ ಅದರ ವಾಯವ್ಯ ಮೂಲೆಯನ್ನು ಸೇರಿ, ನಂತರ ದಕ್ಷಿಣಾಭಿಮುಖವಾಗಿ ಅದೇ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಮಂಗಳ ಗ್ರಾಮದ ಸರ್ವೆ 58ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ, ನಂತರ ಅದೇ ದಿಕ್ಕಿನಲ್ಲಿ ಮಂಗಲದ ಸರ್ವೆ 25-24ನೆ ನಂಬರುಗಳ ಮಾರ್ಗವಾಗಿ 6½ ಫರ್ಲಾಂಗು ಹೋಗಿ, ಸದರಿ ಗ್ರಾಮದ ಸರ್ವೆ 39ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ. ನಂತರ ನೈರುತ್ಯವಾಗಿ ಸರ್ವೆ 39ನೆ ನಂಬರಿನ ಪಶ್ಚಿಮ ಸರಹದ್ದನ್ನು ಅನುಸರಿಸಿ ಮತ್ತು ಮಂಗಲದ ಸರ್ವೆ 20ನೆ ನಂಬರು ಮೂಲಕ ¾ ಫರ್ಲಾಂಗುದೂರ ಹೋಗಿ ಮಂಗಲದ ಸರ್ವೆ 73ನೆ ನಂಬರಿನ ಪಶ್ಚಿಮ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ದಕ್ಷಿಣಾಭಿಮುಖವಾಗಿ 1½ ಫರ್ಲಾಂಗುದೂರ ಹೊರಟು ಮಂಗಲ ಮತ್ತು ಕಣಿಯನಪುರದ ಮಧ್ಯದ ಎಲ್ಲೆಯನ್ನು ಕಣಿಯನಪುರದ ಸರ್ವೆ 26ನೆ ನಂಬರಿನ ವಾಯವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಅದೇ ದಿಕ್ಕಿನಲ್ಲಿ ಕಣಿಯನಪುರದ ಸರ್ವೆ 26ನೆ ನಂಬರು ಪಶ್ಚಿಮ ಮಾರ್ಗವಾಗಿ ಸುಮಾರು 5¾ ಫರ್ಲಾಂಗು ಹೋಗಿ, ಕಣಿಯನಪುರದ ಸರ್ವೆ 26ನೆ ನಂಬರು ನೈರುತ್ಯ ಮೂಲೆಯನ್ನು ಸೇರುತ್ತದೆ. ನಂತರ ಆಗ್ನೇಯಕ್ಕೆ ತಿರಗಿ ಕಣಿಯನಪುರದ ಸರ್ವೆ 22, 16ನೆ ನಂಬರುಗಳ ಮೇಲೆ 15¼ ಫರ್ಲಾಂಗು ಫಾಸಲೆ ಹೋಗಿ ಕಣಿಯನಪುರ ಮತ್ತು ಮಾಯಾರ ಮನ್ನಾಜಂಗಲಿಗಳ ಗಡೀಬಾಂದನ್ನು ಸೇರುತ್ತದೆ. ನಂತರ ದಕ್ಷಿಣ ಮುಖವಾಗಿ ಮಾಯಾರ್ ಮನ್ನಾಜಂಗಲಿಯ ಪಶ್ಚಿಮ ಸರಹದ್ದನ್ನು ಅನುಸರಿಸಿ ಮಾಯಾರ್ ನದಿಯನ್ನು ಸೇರುತ್ತದೆ.

ದಕ್ಷಿಣಕ್ಕೆ—ನಂತರ ಪಶ್ಚಿಮಾಭಿಮುಖವಾಗಿ ಮಾಯಾರ್ ನದಿ ಮಾರ್ಗವಾಗಿ ಹೋಗಿ ಬಂಡೀಪುರದ ಮನ್ನಾ ಜಂಗಲಿಯ ಎಲ್ಲೆ ಮತ್ತು ಮಾಯಾರ್ ನದಿ ಸೇರುವ ಸ್ಥಳವನ್ನು ಮುಟ್ಟುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಬಂಡೀಪುರದ ಮನ್ನಾಜಂಗಲಿಯ ಸರಹದ್ದು ಲೈನನ್ನು ಘಾದಗಿತ್ತಿ ದುರ್ಗದ ವರಿವಿಗೂ ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು ಮಿ॥ ಸಿ. ವೆಂಕಟರಾವ್, ಬಿ.ಎ. ಯವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಖಿಮಾನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಖಿಮಾನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ರಾಡಲೂ, ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸರ್ಕಾರ್ ತರಫು ಕುಮ್ಮಕ್ ಮಾಡಲು ಹಾಜರಾಗುವಂತೆ ಮೊಕರರ್ರಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನ್ನರನ್ನು, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 14ನೆ ಅಕ್ಟೋಬರ್ 1909.

ನಂ. 3090—ಫಾರೆಸ್ಟ್ 58-09-2, ಸ್ ೧೯೦೦ನೆ ಇಸವಿ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 4ನೆ ಪ್ರಕರಣದ ನಿಯಮಗಳನ್ನನುಸರಿಸಿ ಮೈಸೂರು ಸೀಮೆಯ ಘನವನ್ನೆತ್ತಿದ ಶ್ರೀಮತ್ ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರ ಸರ್ಕಾರದಿಂದ ಪ್ರಸಿದ್ಧಪಡಿಸುವದೇನಂದರೆ—

ಇದರಡಿ ಷೆಡ್ಯೂಲಿನಲ್ಲಿ ವಿವರಿಸಿರುವ ಪ್ರದೇಶವನ್ನು ಮೇಲ್ಕಂಡ ರೆಗ್ಯುಲೇಷನಿನ ನಿಯಮಗಳ ಪ್ರಕಾರ [ಮನ್ನಾ ಜಂಗಲಿಯನ್ನಾಗಿ ಮಾಡಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್.

ತಾಲ್ಲೂಕು.	ಹೋಬಳಿ.	ಅಂದಾಜು ವಿಸ್ತೀರ್ಣ.	ಬ್ಲಾಕಿನ ಹೆಸರು.	ಬ್ಲಾಕು ಇರತಕ್ಕ ಸ್ಥಳ.
ಚಾಮರಾಜನಗರ.	ನಗರ ಲಕ್ಷ್ಮೀಪುರ.	೩,೫41 ಎಕರೆ ಅಥವಾ 5 ಚದರ ಮೈಲಿ 341 ಎಕರೆ.	ಜಕ್ಕಳ್ಳಿ.	ಕೊಡಚಾದ್ರಿ ಮನ್ನಾ ಜಂಗಲಿಯ ಪೂರ್ವ ಭಾಗದ ಬಡಾವಣೆ.

ಉತ್ತರಕ್ಕೆ—ದಕ್ಷಿಣ ಕನಡ ಜಿಲ್ಲೆ ಕುಂದಾಪುರ ತಾಲ್ಲೂಕು ಕರಕಮಡಿ ಅಲಗೋಡು ಗ್ರಾಮಗಳ ಮತ್ತು ಮೈಸೂರು ಸೀಮೆಯ ನಗರ ತಾಲ್ಲೂಕು ಮಂಜಗಳಲೆ ಗ್ರಾಮದ ಮುಕ್ತುಪ್ಪೆ ಬಾಂದಿನಿಂದ ಲೈನ್ ಹೊರಟು ಆಗ್ನೇಯವಾಗಿ ಸುಮಾರು 6 ಫರಲಾಂಗು, ಅಲಗೋಡು ಗ್ರಾಮದ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ಗ್ರಾಮ ಮತ್ತು ನಿಟ್ಟೂರು, ಮಂಜಗಳಲೆ ಗ್ರಾಮಗಳ ಮುಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರಲಾಂಗು ಮಂಜಗಳಲೆ ಸರ್ವೆ ನಂಬರ 88ರಲ್ಲಿ ಹಾದು ಅದೇ ಗ್ರಾಮದ ಸರ್ವೆ ನಂಬರು 91ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯ ಮತ್ತು ನೈರುತ್ಯವಾಗಿ ಸರ್ವೆ ನಂಬರು 92ರ ಉತ್ತರ ಮತ್ತು ಪಶ್ಚಿಮ ಗಡಿಗಳನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು 5 ಸರಪಣಿ ಸರ್ವೆ ನಂಬರು 88ರಲ್ಲಿ ಹಾದು ಸರ್ವೆ ನಂಬರು 98ರ ನೈ

ರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಮತ್ತು ಪೂರ್ವ ಗಡಿಗಳನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ ಸುಮಾರು 5 ಸರಪಣಿ ಸರ್ವೆ ನಂಬರು 92ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 10ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 5 ಫರಲಾಂಗು 5 ಸರಪಣಿ, ಸರ್ವೆ ನಂಬರು 10ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 70ರ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸದರಿ ನಂಬರಿನ ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 72ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯವಾಗಿ 1 ಫರಲಾಂಗು 5 ಸರಪಣಿ ಸರ್ವೆ ನಂಬರು 73ರ ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 87ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಉತ್ತರ ಗಡಿಯನ್ನನುಸರಿಸಿ ಸದರಿ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 1 ಫರಲಾಂಗು ಸರ್ವೆ ನಂಬರು 88ರಲ್ಲಿ ಹಾದು ಸರ್ವೆ ನಂಬರು 85ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ದಿಕ್ಕಿನಲ್ಲಿ 1 ಫರ್ಲಾಂಗು ಸರ್ವೆ ನಂಬರು 84ರಲ್ಲಿ ಹಾದು ಸರ್ವೆ ನಂಬರು 83ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು 2 ಸರಪಣಿ ಸರ್ವೆ ನಂಬರು 84ರಲ್ಲಿ ಹಾದು ಸರ್ವೆ ನಂಬರು 78ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಪೂರ್ವವಾಗಿ ಸುಮಾರು 6 ಫರಲಾಂಗು ಸರ್ವೆ ನಂಬರುಗಳು 73—70ರಲ್ಲಿ ಹಾದು ಸರ್ವೆ ನಂಬರು 62ರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ 1 ಫರಲಾಂಗು 5 ಸರಪಣಿ ಸರ್ವೆ ನಂಬರು 70ರಲ್ಲಿ ಹಾದು ಸರ್ವೆ ನಂಬರು 10ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಉತ್ತರ ಮತ್ತು ಪೂರ್ವಾಭಿಮುಖವಾಗಿ 5 ಫರಲಾಂಗು 5 ಸರಪಣಿ ಸರ್ವೆ ನಂಬರು 10ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಪೂರ್ವ ಮತ್ತು ದಕ್ಷಿಣವಾಗಿ 5 ಫರಲಾಂಗು 3 ಸರಪಣಿ ಸರ್ವೆ ನಂಬರು 177ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು 5 ಸರಪಣಿ ಸದರಿ ಸರ್ವೆ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ ಸುಮಾರು 5 ಸರಪಣಿ ಸರ್ವೆ ನಂಬರು 179ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರಲಾಂಗು 5 ಸರಪಣಿ ಸರ್ವೆ ನಂಬರು 252—258ರಲ್ಲಿ ಹಾದು ಸರ್ವೆ ನಂಬರು 259ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 2 ಫರಲಾಂಗು 5 ಸರಪಣಿ ಮಂಜಗಳಲೆ ಸರ್ವೆ ನಂಬರು 258, ಕಟ್ಟಿನಹೊಳೆ ಸರ್ವೆ ನಂಬರು 38ರಲ್ಲಿ ಹಾದು ಸರ್ವೆ ನಂಬರು 50ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ 5 ಸರಪಣಿ ಸದರಿ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಅದೇದಿಕ್ಕಿನಲ್ಲಿ ಸುಮಾರು 5 ಫರಲಾಂಗು ದೂರ ಸರ್ವೆ ನಂಬರು 38ರಲ್ಲಿ ಹಾದು ಸರ್ವೆ ನಂಬರು 26ರ ವಾಯವ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 5 ಸರಪಣಿ ಸರ್ವೆ ನಂಬರು 38ರಲ್ಲಿ ಹಾದು ಸರ್ವೆ ನಂಬರು 25ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ 8 ಸರಪಣಿ ಫಾಸಲೆ ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರಲಾಂಗು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 4 ಫರಲಾಂಗು 2 ಸರಪಣಿ ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 39ರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 3 ಫರಲಾಂಗು 8 ಸರಪಣಿ ಕಟ್ಟಿನಹೊಳೆ ಸರ್ವೆ ನಂಬರು 36 ಮಂಜಗಳಲೆ ಸರ್ವೆ ನಂಬರು 253ರಲ್ಲಿ ಹಾದು ಮಂಜಗಳಲೆ ಸರ್ವೆ ನಂಬರು 263ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ 5 ಸರಪಣಿ ಸದರಿ ನಂಬರಿನ ಪೂರ್ವ ಗಡಿಯನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 5 ಫರಲಾಂಗು 5 ಸರಪಣಿ ಮಂಜಗಳಲೆ ಗ್ರಾಮದ ಸರ್ವೆ ನಂಬರುಗಳು 259—252ರಲ್ಲಿ ಹಾದು ಸರ್ವೆ ನಂಬರು 255ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 6 ಫರ್ಲಾಂಗು 5 ಸರಪಣಿ ಸರ್ವೆ ನಂಬರು 252ರಲ್ಲಿ ಹಾದು ಮತ್ತಿಕೈ ಸರ್ವೆ ನಂಬರು 35ರ ವಾಯವ್ಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯವಾಗಿ 2 ಫರ್ಲಾಂಗು ಮತ್ತಿಕೈ ಸರ್ವೆ ನಂಬರು 35ರ ಪಶ್ಚಿಮ ಗಡಿಯನ್ನನುಸರಿಸಿಯೂ ಮತ್ತು ದಕ್ಷಿಣವಾಗಿ 6 ಫರ್ಲಾಂಗು ಸರ್ವೆ ನಂಬರು 90ರ ಪಶ್ಚಿಮ ಗಡಿಯನ್ನನುಸರಿಸಿ ಮಂಜಗಳಲೆ, ಮತ್ತಿಕೈ, ಕಟ್ಟಿನಹೊಳೆ ಗ್ರಾಮಗಳ ಮುಕ್ಕುಪ್ಪೆ ಬಾಂಬಿಗೆ ಸೇರುತ್ತದೆ. ನಂತರ ಪೂರ್ವವಾಗಿ 2 ಫರ್ಲಾಂಗು ಸರ್ವೆ ನಂಬರು 90ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 76ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ದಕ್ಷಿಣವಾಗಿ 5 ಫರ್ಲಾಂಗು ಸರ್ವೆ ನಂಬರು 76ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 101ರ ಉತ್ತರ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 4 ಫರ್ಲಾಂಗು ಸರ್ವೆ ನಂಬರು 84ರಲ್ಲಿ ಹಾದು ಸರ್ವೆ ನಂಬರು 14ರ ಉತ್ತರ ಮೂಲೆಗೆ ಸೇರುತ್ತದೆ. ಅಲ್ಲಿಂದ 8 ಸರಪಣಿ ಸದರಿ ಸರ್ವೆ ನಂಬರಿನ ಉತ್ತರ ಗಡಿಯನ್ನನುಸರಿಸಿ ಸರ್ವೆ 24ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರುಗಳು 24, 20, 19, 18, 17 ಮತ್ತು 16ರ ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 16ರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸದರಿ ನಂಬರಿನ ಪಶ್ಚಿಮಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರ್ಲಾಂಗು 5 ಸರಪಣಿ ಸರ್ವೆ ನಂಬರು 15ರಲ್ಲಿ ಹಾದು ಸರ್ವೆ ನಂಬರು 23ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 4 ಫರ್ಲಾಂಗು 2 ಸರಪಣಿ ಸರ್ವೆ ನಂಬರು 15ರಲ್ಲಿ ಹಾದು ಸರ್ವೆ ನಂಬರು 1ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 1 ಫರ್ಲಾಂಗು ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 2 ಫರ್ಲಾಂಗು 5 ಸರಪಣಿ ಸರ್ವೆ ನಂಬರು 14ರ ಪೂರ್ವ ಗಡಿಯನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 5 ಫರ್ಲಾಂಗು 5 ಸರಪಣಿ ಸರ್ವೆ ನಂಬರು 84ರಲ್ಲಿ ಹಾದು ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಪಶ್ಚಿಮಾಭಿಮುಖವಾಗಿ ಸುಮಾರು 1 ಮೈಲಿ 5 ಫರ್ಲಾಂಗು 5 ಸರಪಣಿದೂರ ಕಟ್ಟನೆಹೊಳೆಯ ಸರ್ವೆ ನಂಬರು 126ರ ಉತ್ತರ ಗಡಿಯನ್ನನುಸರಿಸಿ ಸದರಿ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯಾಭಿಮುಖವಾಗಿ 1 ಮೈಲಿ 2 ಫರ್ಲಾಂಗು 5 ಸರಪಣಿ ದಕ್ಷಿಣ ಕನಡ ಜಿಲ್ಲಾ ಗಡಿಯನ್ನನುಸರಿಸಿ ಮೈಸೂರು ಶೀಮೆಯ ಮಂಜಗಳಲೆ, ಕಟ್ಟನೆಹೊಳೆ ಗ್ರಾಮಗಳ ಮತ್ತು ಕುಂದಾಪುರ ತಾಲ್ಲೂಕು ಬಿಳಿಕಲ್ ಗ್ರಾಮದ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈಟ್ ವಾಯವ್ಯವಾಗಿ 5 ಫರ್ಲಾಂಗು 5 ಸರಪಣಿ ದಕ್ಷಿಣ ಕನಡ ಜಿಲ್ಲಾ ಗಡಿಯನ್ನನುಸರಿಸಿ ಅದೇ ಮಾರ್ಗವಾಗಿ ಸುಮಾರು 1 ಮೈಲಿ 6 ಫರಲಾಂಗು ಸಾಗರ ತಾಲ್ಲೂಕು ಗಡಿಯನ್ನನುಸರಿಸಿ (ಅಥವಾ ಕೊಡಚಾದ್ರಿ) ಮನ್ನಾ ಜಂಗಲಿಯ ಪೂರ್ವ ದಿಕ್ಕಿನ ಡಿವಾರ್ಕೇಷನ್ ಲೈನನ್ನು ಅನುಸರಿಸಿ) ಸಾಗರ ತಾಲ್ಲೂಕು ವೊಳ್ಳೂರು, ಕುಂದಾಪುರದ ತಾಲ್ಲೂಕು ಕರಕಮಡಿ, ನಗರ ತಾಲ್ಲೂಕು ಮಂಜಗಳಲೆ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲಾ ಗಡಿಯನ್ನನುಸರಿಸಿ ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಮಿ॥ ಸಿ. ವೆಂಕಟರಾವ್, ಬಿ.ಎ., ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುನಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ರಾಡಲೂ ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸರ್ಕಾರ ತಪ್ಪದೆ ಕುಮ್ಮಕ್ಕುಮಾಡಲು ಹಾಜರಾಗುವಂತೆ ಮೊಕರರ್ರಾಡಲೂ ಸಹ, ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯೂಟಿ ಕಮಿಷನರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 9ನೆ ನವಂಬರ 1909.

ನಂ. ರೆ. 3399—ಫಾರೆಸ್ಟ್ 1—09—4, ಶಿವಮೊಗ್ಗ ಡಿಸ್ಟ್ರಿಕ್ಟಿನಿಂದ ಮೈಸೂರು ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗಾಯಿಸಲ್ಪಟ್ಟಿರುವ ಸಬ್ ಅಸಿಸ್ಟೆಂಟ್ ಕಣಸರ್ವೇಟರ್ ಮಿ॥ ಜಿ. ಕೃಷ್ಣಮೂರ್ತಿನಾಯಿಡು ಯವರ ಐವಜಿನಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡತಕ್ಕ ಖಗ್ಯೆ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಣಸರ್ವೆಟರಾದ ಮಿ॥ ಎಂ. ಎ. ವರದಾಚಾರ್ ರವರನ್ನು ಸದರೀ ಡಿಸ್ಟ್ರಿಕ್ಟಿಗೆ ವರ್ಗಾಯಿಸಿರುತ್ತದೆ.

ಮೈಸೂರು, ತಾರೀಖು 29ನೆ ಮಾಹೆ ಅಕ್ಟೋಬರ್ 1909ನೆ ಇಸವಿ.

ಕ್ಯಾಂಪ್ ನಂಬರ್ R. 28—Ft.

ಕಾಕನಕೋಟೆಯಿಂದ ಮಾಸ್ತಿಗುಡಿಗೆ ಹೋಗುವ ರಸ್ತೆಯನ್ನು ಕೆಡ್ಡಾ ಏಪ್ರಿಲ್‌ಗೋಸ್ಕರ 1909ನೆ ನವಂಬರ್ ಗುರ್ರೆಲಾಗಾಯಿತು ಡಿಸೆಂಬರು 3ನೆ ತಾರೀಖಿನ ವರೆಗೆ ಆಮದುರಫ್ತು ಗಾಡಿಗಳು ತಿರುಗಾಡದಂತೆ ಬಂದುಮಾಡಿ ಇರುತ್ತದೆ ಎಂದು ಈ ಮೂಲಕ ಪ್ರಕಟಿಸಿ ಇದೆ. ಸರ್ಕಾರಕ್ಕೆ ಅಥವಾ ಸರ್ಕಾರೀ ನೌಕರಂಗ ಸೇರಿದ ನಾಟಾ ಸಾಗಿಸುವ ಗಾಡಿಗಳು ಶಿವಾಯಿ ಇತರ ಗಾಡಿಗಳನ್ನೂ ಪ್ರಯಾಣಿಕರ ಗಾಡಿಗಳನ್ನೂ ಹಗಲುಹೊತ್ತಿನಲ್ಲಿ ಸದರಿ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಡಲಾಗುವುದು. ಇತರ ಗಾಡಿಗಳನ್ನು ಮಾಸ್ತಿಗುಡಿ ಮತ್ತು ಕಾಕನಕೋಟೆ ಕೆಡ್ಡಾ ಕ್ಯಾಂಪುಗಳ ಚಾರ್ಜಿನಲ್ಲಿರುವ ಫಾರೆಸ್ಟ್ ಆಫಿಸರುಗಳ ಅಪ್ಪಣೆಯ ಮೇರೆಗೆ ಮಾತ್ರವೇ ಸದರಿ ರಸ್ತೆಯಲ್ಲಿ ಬಿಡಲಾಗುವುದು.

ತಾರೀಖು 16ನೆ ನವೆಂಬರ್ 1909.

ನಂ. ಲೆ. 3690—ಲ್ಯಾ. ರೆ. 33–09–8, ಸ॥ 1894ನೆ ವರ್ಷದ 7ನೆ ನಂಬರ ಅಸ್ಸಾಂ ಲೆಗ್ಯುಲೇಷನ್ನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧ ಪಡಿಸುವುದೇನಂದರೆ: —ಇದರಲ್ಲಿ ವಿವರಿಸಿರುವ ಪಟ್ಟಿಯಲ್ಲಿ ಸೂಚಿಸಿರುವ ಸರಾಸರಿ ಎಂದರೆ, ಕಾಡಜಿಮ್ಮ ಗ್ರಾಮವು ಬೆಂಗಳೂರು ಜಿಲ್ಲೆಯ ಆನೇಕಲ್ಲು ತಾಲ್ಲೂಕಿಗೆ ಸೇರಿದ್ದಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನ್ನಿನ 7 ನೆಯ ಪ್ರಕರಣದ (೮) ಪ್ರಕಾರಣಗಳನ್ನನುಸರಿಸಿ ಮಾನಂಗೆರೆ ಸರ್ವೆ ಡಿವಿಜ್ಞ ಬಾಜಿಜ್ ನಲ್ಲಿ ಇರುವ ಅಸಿಸ್ಟೆಂಟ್ ಸೆಟಲ್ ಮೆಂಟ್ ಆಫೀಸರರಿಗೆ ಹೊಂದುವುದಕ್ಕೆ ಕ್ರಮವು ಜರುಗಿಸಲು ಅಧಿಕಾರ ಕೊಟ್ಟಿದೆ.

ಜಿಲ್ಲೆಯ ಹೆಸರು.	ತಾಲ್ಲೂಕಿನ ಹೆಸರು.	ಜಿಲ್ಲೆಯಲ್ಲಿ ಸೇರಿರುವ ಹೋಬಳಿಗಳ ಸಂಖ್ಯೆ.	ಹೋಬಳಿಗಳ ಹೆಸರು.	ಒಟ್ಟು ಸರಾಸರಿ ಪ್ರಮಾಣ.			ಒಟ್ಟು ಸರಾಸರಿ ಪ್ರಮಾಣದಲ್ಲಿ ಕಡಿಮೆ ಮಾಡಿರುವ ಪ್ರಮಾಣ.			ಒಟ್ಟು ಸರಾಸರಿ ಪ್ರಮಾಣದಲ್ಲಿ ಕಡಿಮೆ ಮಾಡಿರುವ ಪ್ರಮಾಣದ ಕಾರಣಗಳು.	ಚಕ್ಕುಬಂದಿ.			ಷರಾ.
				ಎ.	ಗು.	ಚ. ಅ.	ಎ.	ಗು.	ಚ. ಅ.	ಎ.	ಗು.	ಚ. ಅ.		ಪೂರ್ವ.	ಪಶ್ಚಿಮ.	ಉತ್ತರ.	
ಬೆಂಗಳೂರು	ಪೂರ್ವ ಭಾಗ ಆನೇಕಲ್ಲು.	91	ಖುಷ್ಕಿ	25	13		0	9		25	4		ಸಂಖ್ಯೆ ನಂಬರು 90ನೆ ಜಮಿನಾನು ಪಟ್ಟಾದಾರಿಗೆ ಉಂಟಾಗಿರುವುದು.	93–94ನೆ ಜಮಿನಾನು ಸೇರಿಸಿ	ಈ 91ನೆ ಜಮಿನಾನು ಪೈಕಿ ಬಾಕಿ ಪ್ರಮಾಣ ಪ್ರಸ್ತಾಪಕ್ಕೆ	81-82-92-83ನೆ ಜಮಿನಾನುಗಳು
	ಸಿದ್ದಲಿಂಗಪುರ ಬೀ॥ ಸಿದ್ದಲಿಂಗಪುರ ಗಿರಿಯಪ್ಪನ.	93	ತಿಟ್ಟೋ	24	1	0	5	23	36	10	0		91–92ನೆ ಜಮಿನಾನುಗಳು	96ನೆ ಜಮಿನಾನು	94ನೆ ಜಮಿನಾನು	ಆದೆ ನಂಬರು ಪೈಕಿ ಪ್ರಸ್ತುತ ಪ್ರಸ್ತಾಪಕ್ಕೆ
	ಚಪ್ಪನದೀನಪಾಳ್ಯ ಬೀ॥ ಕಾರೇಮುದ್ದಿ ಸಾಬಿ.	94	ತಿಟ್ಟೋ	16	27	0	24	16	3	10	0		91ನೆ ಜಮಿನಾನು	95ನೆ ಜಮಿನಾನು	ಹಳೇ ಗ್ರಾಮವು ಮತ್ತು ಈ ಜಮಿನಾನು ಪೈಕಿ ಬಾಕಿ ಉಳಿದ ಪ್ರಸ್ತಾಪಕ್ಕೆ	91–93ನೆ ಜಮಿನಾನುಗಳು
	ಭೀಮಯ್ಯನ ಬೀ॥ ಮತ್ತು ಚಿಕ್ಕಯ್ಯನ ತೋಟ.	95	ತಿಟ್ಟೋ	22	34	0	26	23	8	14	0		94ನೆ ಜಮಿನಾನು	99–142ನೆ ಜಮಿನಾನುಗಳು	ಈ ನಂಬರು ಪೈಕಿ ಬಾಕಿ ಉಳಿದ ಪ್ರಸ್ತಾಪಕ್ಕೆ	96ನೆ ಜಮಿನಾನು
	ಕಂಬಾಸಪ್ಪ ಬೀ॥ ಭೀಮಯ್ಯ ಬಿಸಲೇರಿ.	96	ತಿಟ್ಟೋ	18	14	0	5	18	9	9	0		93ನೆ ಜಮಿನಾನು	97–98ನೆ ಜಮಿನಾನುಗಳು	95ನೆ ಜಮಿನಾನು	ಈ ನಂಬರು ಪೈಕಿ ಬಾಕಿ ಪ್ರಸ್ತಾಪಕ್ಕೆ
										30	0	15 12				

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ, ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರಿಟರಿ.